# ಪರ್ಯಾಯ ಶೈಕ್ಷಣಿಕ ಯೋಜನೆ : 2021–22

**ತರಗತಿ : 10** **ತಿಂಗಳು : ಅಕ್ಟೋಬರ್** **ವಿಷಯ : ದ್ವಿತೀಯ ಭಾಷೆ ಕನ್ನಡ**

| ಕ್ರಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 1 | **ಅಕ್ಟೋಬರ್**<br>ಮೊದಲನೆಯ ವಾರ | **ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ**<br>• ಆಲಿಸಿದ ವಿಷಯವನ್ನು ಗ್ರಹಿಸಿ ಬರೆಯುವ ಸಾಮರ್ಥ್ಯವನ್ನು ಬೆಳೆಸುವುದು. | • ವಿಕಲ ಚೇತನರಾಗಿದ್ದರೂ ಸಹ ಅಸಾಮಾನ್ಯ ಸಾಧನೆಗೈದ ಪ್ರಮುಖ ಸಾಧಕರ ವ್ಯಕ್ತಿಚಿತ್ರದ ಆಡಿಯೋವನ್ನು ಕೇಳಿಸುವುದು ಅಥವಾ ವಿಡಿಯೋ ತೋರಿಸುವುದು. ವಿದ್ಯಾರ್ಥಿಗಳಿಂದ ಆಲಿಸಿದ ವಿಷಯವನ್ನು ಕುರಿತು ಸಂಕ್ಷಿಪ್ತವಾಗಿ ಬರೆಸುವುದು. | |
| | | • ಸಂಭಾಷಣೆಯನ್ನು ಗ್ರಹಿಸಿ ಯಾರು? ಯಾವಾಗ? ಎಂಬ ಪ್ರಶ್ನೆಗಳಿಗೆ ಉತ್ತರಿಸುವ ಸಾಮರ್ಥ್ಯವನ್ನು ಬೆಳೆಸುವುದು. | • ಸಂದರ್ಶನ ಮಾದರಿಯಲ್ಲಿ ಲೇಖಕರ ಪರಿಚಯ ಮಾಡಿಸುವುದು. (ವಿದ್ಯಾರ್ಥಿಗಳಿಗೆ ಕವಿ ಹಾಗೂ ಸಂದರ್ಶಕನ ಪಾತ್ರವನ್ನು ನೀಡಿ ಕವಿಗೆ ಸಂಬಂಧಿಸಿದ ಅಂಶಗಳನ್ನು ಸಂದರ್ಶನದ ಮೂಲಕ ಪರಿಚಯಿಸುವುದು. ) | ಕವಿ ಪರಿಚಯವನ್ನು ವಾಕ್ಯರೂಪದಲ್ಲಿ ಬರೆಸುವುದು |
| | | • ಸೂಕ್ತ ಸ್ವರಭಾರದೊಂದಿಗೆ ಸ್ಪಷ್ಟವಾಗಿ ಓದುವ ಕೌಶಲವನ್ನು ಬೆಳೆಸಿಕೊಳ್ಳುವರು. | • ಅನುಕೂಲಕಾರರಿಂದ ಮಾದರಿ ವಾಚನ<br>• ವಿದ್ಯಾರ್ಥಿಗಳಿಂದ ಬಾಯ್ದೆರೆ ವಾಚನ<br>• ಮೌನಓದು | |
| | | • ಸರಳ ಭಾಷಾಂಶಗಳನ್ನು ತಿಳಿಯುವುದು | • ಪಾಠದಲ್ಲಿ ಬಂದಿರುವ ಹೊಸ ಪದಗಳಿಗೆ ನಿಘಂಟಿನ ಸಹಾಯದಿಂದ ಅರ್ಥ ಹುಡುಕಲು ಹೇಳುವುದು. ನಂತರ ಆ ಪದಗಳನ್ನು ಬಳಸಿ | |

| | | | | |
|---|---|---|---|---|
| | | | ಸ್ವಂತ ವಾಕ್ಯದಲ್ಲಿ ಬರೆಯಲು ಹೇಳುವುದು<br>• ಗದ್ಯಭಾಗದಲ್ಲಿ ಬಂದಿರುವ ಕ್ರಿಯಾಪದಗಳನ್ನು ಪಟ್ಟಿಮಾಡಿ ಅವುಗಳ ಧಾತುವನ್ನು ಬರೆಯಲು ತಿಳಿಸುವುದು.<br>• ತತ್ಸಮ– ತದ್ಭವ, ಗ್ರಾಂಥಿಕ ರೂಪ, ವಿರುದ್ಧಾರ್ಥಕ ಪದಗಳನ್ನು ಪರಿಚಯಿಸುವ ಚಟುವಟಿಕೆ<br>**ಅಭ್ಯಾಸ ಹಾಳೆ – 01** | |
| | **ಅಕ್ಟೋಬರ್**<br>ಎರಡನೆಯ ವಾರ | • ಓದಿದ ವಿಷಯವನ್ನು ಗ್ರಹಿಸಿ ತನ್ನ ಮಾತುಗಳಲ್ಲಿ ವಿವರಿಸುವರು. | • ಪುಟ್ಟರಾಜ ಗವಾಯಿಗಳ ಬಾಲ್ಯಜೀವನದ ವಿಚಾರಗಳನ್ನು, ಘಟನೆಗಳನ್ನು ಸಂಗ್ರಹಿಸಿ ಮಾತನಾಡುವಂತೆ ಸೂಚಿಸುವುದು. | |
| | | • ಓದಿದ ಅಂಶಗಳನ್ನು ಗ್ರಹಿಸಿ ತನ್ನದೇ ವಾಕ್ಯಗಳಲ್ಲಿ ಬರೆಯುವುದು. | • ಪುಟ್ಟರಾಜ ಗವಾಯಿ ಅವರ ಸಾಧನೆಯನ್ನು ತಮ್ಮ ಮಾತುಗಳಲ್ಲಿ ಬರೆಯಲು ಪ್ರೇರೇಪಿಸುವುದು. | ಯಾರಾದರೂ ಒಬ್ಬ ವಿಕಲ ಚೇತನ ಸಾಧಕರ ಪರಿಚಯ ಮಾಡಿ |
| | | • ಪಠ್ಯವನ್ನು ಓದಿ ಅರ್ಥ ಮಾಡಿಕೊಂಡು ನಂತರ ಹೇಗೆ? ಏನು? ಯಾವುದು? ಮುಂತಾದ ಪ್ರಶ್ನೆಗಳಿಗೆ ಉತ್ತರಿಸುವ ಸಾಮರ್ಥ್ಯವನ್ನು ಬೆಳೆಸುವುದು. | • ಪಾಠದಲ್ಲಿರುವ ಪ್ರಶ್ನೆಗಳಿಗೆ ಉತ್ತರಿಸುವ ಚಟುವಟಿಕೆ.<br>• ನಾಮಪದಗಳ ವಿಧಗಳ ಪುನರ್ ಮನನ **(ಅಭ್ಯಾಸ ಹಾಳೆ 2)** | ಅಭ್ಯಾಸದ ಪ್ರಶ್ನೆಗಳಿಗೆ ಉತ್ತರ ಬರೆಸುವುದು |

| | | | | |
|---|---|---|---|---|
| | **ಅಕ್ಟೋಬರ್** ಮೂರನೆಯ ವಾರ | **ಕಳ್ಳರ ಗುರು**<br>• ಕೊಟ್ಟಿರುವ ವಿಷಯವನ್ನು ಸ್ವತಂತ್ರವಾಗಿ ಓದಿ ಅರ್ಥೈಸಿಕೊಳ್ಳುವುದು. | • ಕಳ್ಳರ ಗುರು ಪಾಠಭಾಗವನ್ನು ಮೌನವಾಗಿ ಓದಿಕೊಳ್ಳಲು ತಿಳಿಸುವುದು. ನಂತರ ಪ್ರಮುಖ ಅಂಶಗಳನ್ನು ವಿವರಿಸಲು ಸೂಚಿಸುವುದು. | |
| | | • ಬರೆವಣಿಗೆ ಸಾಮರ್ಥ್ಯವನ್ನು ಬೆಳೆಸುವುದು. | • ಪಾಠದ ಆಯ್ದ ವಾಕ್ಯಗಳನ್ನು ಉಕ್ತಲೇಖನ ಚಟುವಟಿಕೆಯ ಮೂಲಕ ಬರೆಸುವುದು. | |
| | | • ಸ್ವತಂತ್ರವಾಗಿ ಓದಿ ವಿಚಾರಗಳನ್ನು ಗ್ರಹಿಸಿದ ನಂತರ ಏನು? ಏಕೆ? ಹೇಗೆ? ಎಂಬ ಪ್ರಶ್ನೆಗಳಿಗೆ ಉತ್ತರಿಸುವರು . | • ಕಳ್ಳರ ಗುರು ಪಾಠವನ್ನು ಓದಿ ಅಭ್ಯಾಸ ಹಾಳೆಯಲ್ಲಿ ನೀಡಲಾದ ಪ್ರಶ್ನೆಗಳಿಗೆ ಉತ್ತರಿಸುವಂತೆ ಹೇಳುವುದು .<br><br>**ಅಭ್ಯಾಸ ಹಾಳೆ 3** | |

# ಅಭ್ಯಾಸ ಹಾಳೆ 1

## ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ

- **ಈ ಕೆಳಗಿನ ತತ್ಸಮ-ತದ್ಭವ ಪದಗಳನ್ನು ಸರಿಯಾಗಿ ಹೊಂದಿಸಿ ಬರೆಯಿರಿ**

| ದೃಷ್ಟಿ | ಅಚ್ಚರಿ | ದೃಷ್ಟಿ | ದಿಟ್ಟಿ |
|---|---|---|---|
| ಸಂಸ್ಕೃತ | ಜಾನ/ಗ್ಯಾನ | | |
| ಯೋಗಿ | ದಿಟ್ಟಿ | | |
| ಆಶ್ಚರ್ಯ | ಸಕ್ಕದ | | |
| ಜ್ಞಾನ | ಜೋಗಿ | | |

**ಈ ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ**

**ಮಾದರಿ : ಆಸಕ್ತಿ × ನಿರಾಸಕ್ತಿ**

| | |
|---|---|
| ಶ್ರೇಷ್ಠ × | ಗೌರವ× |
| ಹೊರಗೆ× | ಹೊರಗೆ× |
| ಸ್ವೀಕರಿಸು × | ಬಾಹ್ಯ× |
| ಸ್ವದೇಶಿ × | ಸ್ವಾತಂತ್ರ್ಯ× |

- **ಕೆಳಗೆ ನೀಡಿರುವ ಗ್ರಾಮ್ಯ ಪದಗಳಿಗೆ ಗ್ರಾಂಥಿಕ ರೂಪ ಬರೆಯಿರಿ**
  **ಮಾದರಿ : ಹೋಗ್ಯಾವ – ಹೋಗಿವೆ**

| | | | |
|---|---|---|---|
| ಬರತೈತಲ್ಲ | | ಗುಡ್ಡಿನ | |
| ಅದ್ಕ | | ಒಳಗ | |
| ಅಂತಾರ | | ತಪ್ಪಾತು | |

## ಅಭ್ಯಾಸ ಹಾಳೆ – 02

## ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ

1. ಕೆಳಗೆ ನೀಡಿರುವ ನಾಮಪದಗಳನ್ನು ಸೂಕ್ತವಾಗಿ ವರ್ಗೀಕರಿಸಿ ಬರೆಯಿರಿ.

| ಅಂತಹ, ಬಿಳಿಯ, ಪೂರ್ವ, ಹಲವು, ಆಟ, ಸಾವಿರ, ಮೂಡಣ, ಇಮ್ಮಡಿ, ಅಷ್ಟು, ಸಿಹಿ, ಬಿಳುಪು, ಮೂರನೆಯ, ಆಚೆ, ತೆಂಕಣ, ಇಬ್ಬರು, | |
|---|---|
| ಗುಣವಾಚಕ | |
| ಸಂಖ್ಯಾವಾಚಕ | |
| ಸಂಖ್ಯೇಯವಾಚಕ | |
| ಭಾವನಾಮ | |
| ಪರಿಮಾಣವಾಚಕ | |
| ಪ್ರಕಾರ ವಾಚಕ | |
| ದಿಗ್ವಾಚಕ | |

2. ಈ ಕೆಳಗಿನ ವಾಕ್ಯಗಳಲ್ಲಿ ಬಳಕೆಯಾಗಿರುವ ಸರ್ವನಾಮಗಳನ್ನು ಗುರುತಿಸಿ ಬರೆಯಿರಿ.

**ಮಾದರಿ:** ಅದು ದೊಡ್ಡ ಆಲದಮರ. **ಸರ್ವನಾಮ :** ಅದು

| | |
|---|---|
| ನಿನ್ನ ಸಾಹಸ ಮೆಚ್ಚುವಂತಹದ್ದು . | |
| ಇಂದಿನಿಂದ ಇದು ನನ್ನ ಹಾರ್ಮೋನಿಯಂ ಅಲ್ಲ. | |
| ಬೇರೆಯವರ ವಸ್ತುಗಳನ್ನು ಮುಟ್ಟುವ ಮುನ್ನ ನೀವು ಸಂಬಂಧಿಸಿದವರ ಅನುಮತಿ ಪಡೆಯಬೇಕು. | |
| ನಿನಗೆ ಇಷ್ಟವಿಲ್ಲದಿದ್ದರೆ ನನ್ನ ಜೊತೆ ಬರುವುದು ಬೇಡ. | |

3. ಇವುಗಳನ್ನು ಸೂಕ್ತವಾಗಿ ಹೊಂದಿಸಿ ಬರೆಯಿರಿ

| ಎ | | ಬಿ |
|---|---|---|
| ಅ) ನೀವು | – | ಆತ್ಮಾರ್ಥಕ ಸರ್ವನಾಮ |
| ಆ) ನಾವು | – | ಮಧ್ಯಮ ಪುರುಷ ಸರ್ವನಾಮ |
| ಇ) ಅವಳು | – | ಪ್ರಶ್ನಾರ್ಥಕ ಸರ್ವನಾಮ |
| ಈ) ತಾನು | – | ಉತ್ತಮ ಪುರುಷ ಸರ್ವನಾಮ |
| ಉ) ಎಷ್ಟು | – | ಪ್ರಥಮ ಪುರುಷ ಸರ್ವನಾಮ |

## ಅಭ್ಯಾಸ ಹಾಳೆ – 03

## ಕಳ್ಳರ ಗುರು

**'ಕಳ್ಳರ ಗುರು' ಗದ್ಯಭಾಗವನ್ನು ಓದಿಕೊಂಡು , ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ಹಾವನ್ನು ಕಂಡ ವೈದ್ಯರ ತಲೆಯಲ್ಲಿ ಯಾವ ವಿಚಾರಗಳು ಮೂಡಿ ಬಂದವು?

2. ವೈದ್ಯರ ಯಾವ ಮಾತುಗಳು ಭೀಮನಾಯಕನ ಮನಸ್ಸನ್ನು ಚುಚ್ಚಿದವು?

3. ಭೀಮನಾಯಕನು ವೈದ್ಯರ ವಸ್ತುಗಳನ್ನು ಹಿಂತಿರುಗಿಸಿ ಏನೆಂದು ಹೇಳಿದನು?

4. ಕಳ್ಳರ ಗುರು ಪಾಠದಿಂದ ನಾವು ಕಲಿತುಕೊಳ್ಳಬೇಕಾದ ವಿಚಾರಗಳೇನು?

5. ರತ್ನಳ ಪ್ರಕಾರ, ವೈದ್ಯರ ವೈದ್ಯಕ ಪ್ರಾವಿಣ್ಯಕ್ಕೆ ದೊರೆತ ಪ್ರತಿಫಲವೇನು?